ಶ್ರೀಮದ್ವರಾಜಗುರುಭ್ಯೋನಮಃ

ಮಧ್ವಮತವ ಪೊಂದದವನ ಭಕುತಿಯಾತಕೆ

ರಾಗ -ಸೌರಾಷ್ಟ್ರ( ದೇಸ್) ಆದಿತಾಳ ( ದಾದರಾ)

ಮಧ್ವಮತವ ಪೊಂದದವನ ಭಕುತಿಯಾತಕೆ ॥ ಪ ॥

ಊರ್ಧ್ವಪುಂಡ್ರ ತಿದ್ದದವನ ಕರ್ಮವ್ಯಾತಕೆ ॥ ಅ. ಪ.॥

ದಾನವನ್ನು ಮಾಡದವನ ದ್ರವ್ಯವ್ಯಾತಕೆ ।

ಸ್ನಾವನ್ನು ಮಾಡದವನ ಮೌನವ್ಯಾತಕೆ ।

ಮಾನಿನಿಯು ಇಲ್ಲದವನ ಬದುಕು ಯಾತಕೆ ।

ಧ್ಯಾನವನು ಅರಿಯದವನ ಪೂಜೆ ಯಾತಕೆ ॥ 1 ॥

ವಂಶವನ್ನುದ್ಧರಿಸದಂಥ ಮಗನು ಯಾತಕೆ ।

ಹಿಂಸೆಯನ್ನು ಪಡಿಸುವಂಥ ಅರಸು ಯಾತಕೆ ।

ಸಂಸಾರವನ್ನು ಒಲ್ಲದಂಥ ಸತಿಯು ಯಾತಕೆ ।

ಕಂಸಾರಿಯನು ತಿಳಿಯದಂಥ ಜ್ಞಾನವ್ಯಾತಕೆ ॥2 ॥

ಬಂಧು-ಬಳಗ ಬಿಟ್ಟು ಉಂಬ ನೆಂಟರ್‍ಯಾತಕೆ ।

ಕಂದರನ್ನು ಮಾರುತಿಪ್ಪತಂದೆಯಾತಕೆ ।

ಬಂದ ಅತಿಥಿಗನ್ನವಿಕ್ಕದ ಸದನವ್ಯಾತಕೆ ।

ನಿಂದೆಗಳನು ಮಾಡುತಿಹನಾಚಾರವ್ಯಾತಕೆ ॥ 3 ॥

ಗುರೂಪದೇಶವಿಲ್ಲದಂಥೆ ಮಂತ್ರವ್ಯಾತಕೆ ।

ಹಿರಿಯರನ್ನು ಸಾಕದವನ ಪುಣ್ಯವ್ಯಾತಕೆ ।

ವರ -ಪ್ರಸಾದವೀಯದಂಥ ದೇವರ್‍ಯಾತಕೆ ॥ 4 ॥

ಏಕಾದಶಿಯ ಮಾಡದವನ ವ್ರತವು ಯಾತಕೆ ।

ಏಕಮನಸು ಇಲ್ಲದವನ ನಡತೆ ಯಾತಕೆ ।

ಸಾಕೆದವನ ಕೊಲ್ಲುವಂಥ ಬಂಟನ್ಯಾತಕೆ ।

ಲೋಕವಾರ್ತೆ ಬಿಡದವನ ಜಪವು ಯಾತಕೆ ॥ 5 ॥

ಭಾಷೆ ಬದ್ದ ವಿಲ್ಲದವನ ಮಾತು ಯಾತಕೆ ।

ಕಾಸುವೀಸಕೆ ಬಡಿದಾಡುವ ಅನುಜರ್‍ಯಾತಕೆ ।

ಲೇಸು ಹೊಲ್ಲೆಹ ನೋಡದಂಥ ಗೆಳೆಯನ್ಯಾತಕೆ ।

ಆಸೆಯನ್ನು ಬಿಡದ ಸಂನ್ಯಾಸವ್ಯಾತಕೆ ॥ 6 ॥

ತಪ್ತ ಮುದ್ರೆಯಿಲ್ಲದವನ ಜನ್ಮವ್ಯಾತಕೆ ।

ಗುಪ್ತದಲ್ಲಿ ನಡೆಯದಿಪ್ಪ ದಾಸನ್ಯಾತಕೆ ।

ಆಪ್ತಬಂಧು ವಿಜಯವಿಠಲನ ಶ್ರೀಚರಣದಿ ।

ಕ್ಲಪ್ತಮೀರದೆ ನಡೆದ ಮೇಲೆ ನರಕವ್ಯಾತಕೆ ॥ 7 ॥

ಶ್ರೀಮಧ್ವೇಶಾರ್ಪಣಮಸ್ತು